ಮಾಡಿಸ್ಬೇಕು? ಯಾರ್ ಕಡ್ಮೆ ಹಣ ತಗೋತಾರೋ ಅವ್ರತ್ರಾನೇ ಹೋಗಿ ಸಿನಿಮಾ ಮಾಡ್ಕೊಂಡು ಲಾಭ ಎಣಿಸ್ಕೊಂಡು ಹಾಯಾಗಿ ಇರ್ಲಿ... ನಾನೇನ್ ಬೇಡ ಅಂದ್ನಾ?

◆ **ರಾಜಾ ಮದಕರಿ ಸಿನಿಮಾ ಬಗ್ಗೆ ಹೇಳಿ**

ಹೇಳೋದೇನಿದೆ? ಶೂಟಿಂಗ್ ನಡೀತಿದೆ ಚಿತ್ರದುರ್ಗದ ಮದಕರಿ ನಾಯಕನ ಬಗ್ಗೆ ಯಾರೂ ಹೆಚ್ಚು ಸಿನಿಮಾ ಮಾಡಿಲ್ಲ... ಒಳ್ಳೆ ಸಬ್ಜೆಕ್ಟು. ಜನರಿಗೆ ಮದಕರಿ ಅವರ ಬಗ್ಗೆ ತಿಳಿಸೋಣ ಅಂತ ಒಂದ್ ಪ್ರಯತ್ನ ಮಾಡ್ತಿದ್ದೀವಿ. ರಾಜೇಂದ್ರ ಸಿಂಗ್ ಬಾಬು ತುಂಬ ದೊಡ್ಡ ಡೈರೆಕ್ಟರು. ಚೆನ್ನಾಗಿ ಮಾಡ್ಕೊಂಡಿದಾರೆ. ರಾಕ್‌ಲೈನ್ ಅವ್ರು ಪ್ರೊಡ್ಯೂಸ್ ಮಾಡ್ತಿದಾರೆ. ಈವತ್ತಿನ ಜನರೇಷನ್ನಿಗೆ ಪೌರಾಣಿಕ ಕಥೆಗಳನ್ನು ಮುಟ್ಟಿಸ್ಬೇಕು ಅಂತ ನಮ್ ಉದ್ದೇಶ. ಕುರುಕ್ಷೇತ್ರ ದೊಡ್ಡ ಸಕ್ಸಸ್ ಆಗಿರೋದು ನಮಗೆ ಇನ್ನಷ್ಟು ಉತ್ಸಾಹ ಕೊಟ್ಟಿದೆ.

◆ **ಯಾವ ರೀತಿ ಸಿದ್ಧತೆ ಮಾಡ್ಕೊಂಡಿದೀರಿ ಪಾತ್ರಕ್ಕೆ?**

ಸಿದ್ಧತೆ ಅಂತೇನಿಲ್ಲ. ನಾನು ಬ್ಲಾಂಕ್ ಆಗಿ ಬರ್ತೀನಿ ಸೆಟ್‌ಗೆ, ಡೈರೆಕ್ಟರು ಹೇಗ್ ಬೇಕೋ ಹಾಗೆ ಬಳಸ್ಕೋಬೋದು ನನ್ನದು ಪೌರಾಣಿಕ ಪಾತ್ರ ಆಗಿದ್ದರಿಂದ ನಮಗೆ ಬೇಕಾದ ಹಾಗೆ ಡೈಲಾಗ್ಸ್ ಹೇಳೊಕಾಗಲ್ಲ. ಅದ್ಕೊಂಡು ಟೋನ್ ಇರತ್ತೆ. ಹಾಗೇ ಹೇಳ್ಬೇಕು ಅದ್ನೆಲ್ಲ ಇಲ್ಲಿ ಬಂದು ಪ್ರಾಕ್ಟೀಸ್ ಮಾಡ್ತೀನಿ. ಕಿರೀಟ, ಭುಜಕೀರ್ತಿ, ಮಣಿಹಾರ ಎಲ್ಲ ತೊಟ್ಕೊಂಡು ಇಡೀ ದಿನ ಶೂಟಿಂಗ್‌ನಲ್ಲಿ ನಿಲ್ಬೇಕು ಅಂದ್ರೆ ಖಂಡಿತ ಪ್ರಿಪರೇಷನ್ ಬೇಕು. ನಾನು ಜಿಮ್‌ನಲ್ಲಿ ಜಾಸ್ತಿ ಹೊತ್ತು ಸ್ಪೆಂಡ್ ಮಾಡಿದ್ದು ಈ ಪಾತ್ರಕ್ಕೆ ತುಂಬ ಹೆಲ್ಪ್ ಆಯ್ತು.

◆ **ಸರ್, ನಿಮ್ಮ ವೈಯಕ್ತಿಕ ಬದುಕಿನ ಬಗ್ಗೆ ಹೇಳಿ.**

(ನಿಲ್ಲು ಅನ್ನೋ ಹಾಗೆ ಕೈ ಮಾಡಿದ್ರು) ತಪ್ಪು ನೋಡಿ, ನಾನ್ ಯಾರು ಅಂತ ಇಲ್ಲಿ ಇಂಟರ್ ವ್ಯೂ ಮಾಡೋಕೆ ಬಂದಿರೋದು ನೀವು? ಆ್ಯಕ್ಟರ್ ಅಂತ ತಾನೆ? ಒಬ್ಬ ಆ್ಯಕ್ಟರ್‌ಗೆ ಏನ್ ಪ್ರಶ್ನೆ ಕೇಳ್ಬೇಕೋ ಅಷ್ಟೇ ಕೇಳಿ ನನ್ ಪರ್ಸನಲ್? ನಾನ್ ಎಷ್ಟೊತ್ತಿಗೆ ಮನೇಗೋಗ್ತೀನಿ ಹೆಂಡ್ತಿ ಜೊತೆ ಹೇಗಿದ್ದೀನಿ? ಇವೆಲ್ಲ ನಿಮಗೆ ಯಾಕ್ ಹೇಳ್ಬೇಕು ನಾನು? ಅಲ್ವಾ? ಒಂದು ಕ್ವಶ್ಚನ್ ಕೇಳ್ತೀನಿ, ಆನ್ಸರ್ ಮಾಡ್ಬೇಕು ನೀವು. ಫಾರ್ ಎಕ್ಸಾಂಪಲ್ ನೀವೊಂದು ನಾಯಿ ಸಾಕ್ತೀರಿ. ಒಳ್ಳೆ ನಾಯಿ ನಾನೂ ಸಾಕಷ್ಟು ನಾಯಿ ನರಿ ಕುರಿ ಕೋಳಿ ಎಲ್ಲಾನೂ ಸಾಕಿದೀನಿ. ಮೈಸೂರಲ್ಲಿ ಒಂದು ಝೂನೇ ಇದೆ... ಅದ್ ಬಿಡಿ. ನೀವೊಂದು ನಾಯಿ ಸಾಕ್ತೀರಿ ಅದು ಒಂದಿನ ನಿಮ್ ಹಾಸಿಗೇಲಿ ಕಕ್ಕ ಮಾಡತ್ತೆ ಅದ್ಕೆ ಒಳ್ಳೆ ಕೆಲಸ ಮಾಡ್ದೆ ಅಂತ ಎತ್ತಿ ಮುದ್ದಾಡ್ತೀರಾ ಅಥವಾ ಹೊಡೀತೀರಾ? ಕಕ್ಕ ಮಾಡಿದೆ ಅಂತ ಒಂದೇಟು ಹಾಕ್ದೆ ಅಂತ ಇವ್ನು ಪ್ರಾಣಿ ವಿರೋಧಿ... ಪ್ರಾಣಿ ಸಾಕೋಕೇ ಬರಲ್ಲ ಅಂತೆಲ್ಲ ಹೇಳೋಕಾಗತ್ತಾ? ಸರೀನಾ? ತಪ್ಪು ತಾನೆ? ಹಿಂಗ್ ಹೇಳ್ದೆ ಅಂತಾನೇ ಬರ್ಕೊಳ್ಳಿ... ನಾನ್ ಯಾರಿಗೂ ಕೇರ್ ಮಾಡಲ್ಲ... ಇನ್ನು ರಸ್ತೆಲಿ ಹೋಗೋವಾಗ ಬೊಗಳೋ ನಾಯಿಗೆ ಕೇರ್ ಮಾಡ್ತೀನಾ? ಚಾನ್ಸೇ ಇಲ್ಲ.

◆ **ಸರ್ ಕನ್ನಡ ಸಿನಿಮಾ ಉದ್ಧಾರ ಆಗ್ಬೇಕು ಅಂದ್ರೆ ಜನ ಅಂಡು ಬಗ್ಗಿಸ್ಕೊಂಡು ಸಿನಿಮಾ ನೋಡ್ಬೇಕು ಅಂತ ನೀವು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಾ...**

ನೋಡಿ ನೀವು ಏನೋ ಬರೀತೀರಾ ನಾನು ಆಡಿದ ಮಾತಿನ ಹಿಂದೆ ಯಾವ ಉದ್ದೇಶ ಇದೆ ಅನ್ನೋದು ಬಿಟ್ಟು ನಿಮಗೆ ಬೇಕಾದ ಹಾಗೇ ಬರ್ಕೋತೀರ. ಟೀವಿಯವ್ರು ಅದ್ನೇ ಹಾಕ್ಕೊಂಡು ಇಪ್ಪತ್ನಾಲ್ಕು ಗಂಟೆ ಹೊಡೀತಾರೆ. ಹೊಡೀರಿ.. ಹೊಡೀರಿ ನೋಡಿ ನಾನು ಎಲ್ಲಾನೂ ಸಮಸಮವಾಗಿ ತಗೊಳೋನು. ನನ್ ಬಗ್ಗೆ ಹೊಗಳಿ ಬರೆದ್ರೂ ಜನರಿಗೆ ನನ್ ಹೆಸ್ರು ಕೇಳಿಸ್ತಿರತ್ತೆ ಬೈದು ಬರೆದ್ರೂ ಕೇಳಿಸ್ತಿರತ್ತೆ ನಾನ್ಯಾಕೆ ಅದ್ಕೆಲ್ಲ ತಲೆಕೆಡಿಸ್ಕಂಬೇಕು? ಅಂಡ್ ಬಗ್ಗಿಸ್ಕಂಡ್ ಅಲ್ಲ, ಅಂಡ್ ತಲೆಮೇಲಿಟ್ಕೊಂಡು ಸಿನಿಮಾ ನೋಡಿ ಅಂತ ಹೇಳ್ದೆ ಅಂತಾನೇ ಬರ್ಕೊಳ್ಳಿ ಹೋಗಿ (ಅಷ್ಟರಲ್ಲಿ ಒಬ್ಬರು ಬಂದು ಸೆಟ್ ರೆಡಿಯಾಗಿದ್ದನ್ನು ಹೇಳಿದರು. ದರ್ಶನ್ ಬಂದ ಶೈಲಿಯಲ್ಲಿಯೇ ವೇಗವಾಗಿ ಎದ್ದು ನಿಂತು ನನ್ನ ಕೈ ಎಳೆದುಕೊಂಡು ಮತ್ತೆ ಕುಲುಕಿ) ಸಾರಿ.. ನಾನು ನಿಮ್ಮನ್ನ ಕಾಯಿಸ್ಬೋದು.. ಬಟ್ ನಂಗೆ ಅನ್ನ ಕೊಡೋ ಸಿನಿಮಾನ ಕಾಯಿಸೋಕಾಗಲ್ಲ. ನನ್ನ ನಂಬ್ಕೊಂಡು ಇಲ್ಲಿ ನೂರಾರು ಜನ್ರಿದಾರೆ. ಪ್ರೊಡ್ಯೂಸರ್ ಇನ್ವೆಸ್ಟ್ ಮಾಡಿದಾರೆ ನಾನು ಹೋಗ್ಲೇಬೇಕು ನಿಮಗೆ ಇನ್ನೂ ಮಾತಾಡ್ಬೇಕು ಅಂತಿದ್ರೆ ನೆಕ್ಸ್ಟ್ ಶಾಟ್ ಮುಗೀವರೆಗೂ ವೇಟ್ ಮಾಡಿ... ಬರ್ತೀನಿ ಆಮೇಲೆ ಊಟ ಮಾಡ್ಕೊಂಡು ಆರಾಮಾಗಿ ಮಾತಾಡ್ಬೋದು' ಎಂದರು.

ನಾನು ಲಗುಬಗೆಯಿಂದ 'ಇಲ್ಲ... ಸಾಕಷ್ಟಾಯ್ತು ಈಗ್ಲೇ. ಥ್ಯಾಂಕ್ಯೂ ಸರ್' ಎಂದು ಎದ್ದುನಿಂತೆ. ಚಾಲೆಂಜಿಂಗ್ ಸ್ಟಾರ್ ಆಶೀರ್ವಾದ ಮಾಡುವ ರೀತಿಯಲ್ಲಿ 'ಒಳ್ಳೆದಾಗ್ಲಿ' ಎಂದು ವೇಗವಾಗಿ ಸೆಟ್ ಕಡೆಗೆ ಹೊರಟುಹೋದರು. ಅವರ ಹಿಂದೆ ನಾಲ್ಕೈದು ಮಂದಿ ಒಮ್ಮೆಲೇ ಜಾತ್ರೆಯ ತೇರು ಸ್ತಬ್ಧವಾದಂತಾಗಿ ಅಲ್ಲಿ ನಿಲ್ಲಲಾಗದೆ ಹೊರಟೆ. ಹಿಂದಿನಿಂದ ಹಾಡು ಮೊಳಗುತ್ತಿತ್ತು...

ಬಿಳಿ ಬಿಳಿ ಬಿಳಿ
ಅರಿಗಳ ಪಾಲಿಗೆ ನರಕದ ದಾರಿ
ಬಿಳಿ ಬಿಳಿ ಬಿಳಿ
ಬಂದಾ ನಮ್ಮ ವೀರ ಮದಕರಿ..

ಏಪ್ರಿಲ್ 1ರ 'ನಗೆದಿನ'ದ
ಹಿನ್ನೆಲೆಯಲ್ಲಿನ ಕಾಲ್ಪನಿಕ ರಚನೆ

ಪ್ರತಿಕ್ರಿಯಿಸಿ: **feedback@sudha.co.in**

